ದಿನಾಂಕ 12-03-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಎದುರುಗಾರರ ಪರ ಶ್ರೀ ಎಂ.ಹೆಚ್.ಹೆಚ್ ವಕೀಲರಿಂದಃ**

1. ನಾನು 10 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ಎದುರುಗಾರನು 4 ನೇ ತರಗತಿವೆ ವಿದ್ಯಾಭ್ಯಾಸ ಮಾಡಿದ್ದಾರೆ. ನಾನು ಮದುವೆ ಆಗಿ ಎದುರುಗಾರನ ಮನೆಗೆ ಹೋದಾಗ ನಮ್ಮೊಂದಿಗೆ ಅವರ ತಂದೆ ತಾಯಿ ಮಾತ್ರ ಇದ್ದರು. ಎದುರುಗಾರರ ತಂದೆಗೆ 70 ವರ್ಷ ಮತ್ತು ತಾಯಿಗೆ 65 ವರ್ಷ ವಯಸ್ಸಾಗಿದೆ ಎಂದರೆ ಸರಿ. ಎದುರುಗಾರನ ತಂದೆ ತಾಯಿ ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸಾಕ್ಷಿಯು ಕೆಲಸ ಮಾಡುತ್ತಾರೆ ಎಂದು ನುಡಿಯುತ್ತಾರೆ. ಎದುರುಗಾರನಿಗೆ 3 ಜನ ಸಹೋದರಿಯರು ಇದ್ದಾರೆ. ಅವರ ಹೆಸರೆಂದರೆ ಶಶಿಕಲಾ, ರೇಖಾ ಮತ್ತು ಉಮಾ. ಶಶಿಕಲಾ ರವರನ್ನು ಕೆಲವರಕೊಪ್ಪ, ರೇಖಾ ಅವರನ್ನು ಮೂಡಿ ಮತ್ತು ಉಮಾರವರನ್ನು ಇಂದೂರಕೊಪ್ಪ ಗ್ರಾಮದ ವರರಿಗೆ ಮದುವೆ ಮಾಡಲಾಗಿದೆ. ಅವರು ತಮ್ಮ ತಮ್ಮ ಗಂಡಂದಿರ ಮನೆಯಲ್ಲಿ ವಾಸ ಇದ್ದಾರೆ ಎಂದರೆ ಸರಿ.

2. ಎದುರುಗಾರರ ಹೆಸರಲ್ಲಾಗಲೀ ಅಥವಾ ಆತನ ತಂದೆ ಹೆಸರಿನಲ್ಲಾಗಲೀ ಜಮೀನು ಇಲ್ಲ ಎಂದರೆ ಸರಿ. ಎದುರುಗಾರನು ಯಾವುದೇ ಕೆಲಸ ಮಾಡುವುದಿಲ್ಲ ಎಂದರೆ ಸರಿಯಲ್ಲ. ಎದುರುಗಾರನು ದೈಹಿಕವಾಗಿ ಅಂಗವಿಕಲ (ವಿಶೇಷ ಚೇತನ) ಇದ್ದಾರೆ ಎಂದರೆ ಸರಿ. ಅವರು ವಿಶೇಷ ಚೇತನರು ಇರುವುದರಿಂದ ಯಾವುದೇ ಕೆಲಸವನ್ನು ಮಾಡಲು ಅಸಮರ್ಥರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಕಾಂಕ್ರೀಟ್ ಕೆಲಸಕ್ಕೆ ಮತ್ತು ಜಮೀನುಗಳಿಗೆ ಕೂಲಿ ಕೆಲಸಕ್ಕೆ ಹೋಗುತ್ತಾರೆ ಎಂದು ನುಡಿಯುತ್ತಾರೆ. ಎದುರುಗಾರನು ವಿಶೇಷ ಚೇತನ ಇರುವುದರಿಂದ ಆತನ ಮೇಲೆ ನನಗೆ ನಿರ್ಲಕ್ಷತೆ ಮತ್ತು ಇಷ್ಟ ಇರುವುದಿಲ್ಲ ಎಂದರೆ ಸರಿಯಲ್ಲ.

3. ಎದುರುಗಾರನಿಗೆ ಯಾವುದೇ ಆದಾಯದ ಮೂಲಗಳು ಇಲ್ಲ ಎಂದರೆ ಸರಿಯಲ್ಲ. ನಾನು ಎದುರುಗಾರನನ್ನು ಮದುವೆ ಆದ ಒಂದು ವರ್ಷದ ನಂತರ ನನ್ನ ಅತ್ತೆ-ಮಾವ ಪ್ರತ್ಯೇಕವಾಗಿ

ವಾಸವಿದ್ದರು ಎಂದರೆ ಸರಿ. ನಾನು ಎದುರುಗಾರನ ತಂದೆ ತಾಯಿಯನ್ನು ನಿರ್ಲಕ್ಷತೆ ಮಾಡಿದ ಕಾರಣಕ್ಕೆ ಅವರು ನಮ್ಮೊಂದಿಗೆ ಇರದೇ ಪ್ರತ್ಯೇಕವಾಗಿ ವಾಸವಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಎದುರುಗಾರನ ತಾಯಿಗೆ ನನ್ನನ್ನು ಕಂಡರೇ ಆಗದೇ ಇದ್ದ ಕಾರಣಕ್ಕೆ ಪ್ರತ್ಯೇಕವಾಗಿ ವಾಸವಿದ್ದರು ಎಂದು ನುಡಿಯುತ್ತಾರೆ.



4. ನನ್ನ ತಂದೆ-ತಾಯಿ ಜೀವಂತ ಇದ್ದಾರೆ ಎಂದರೆ ಸರಿ. ನನಗೆ ಏಕ ಮಾತ್ರ ಸಹೋದರ. ನನ್ನ ತವರು ಮನೆಗೆ ಹೊಂಕಣ ಗ್ರಾಮದಲ್ಲಿ ವ್ಯವಸಾಯದ ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ನನ್ನ ತಾಯಿ ಹೆಸರಿನಲ್ಲಿದ್ದು, ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ. ಮದುವೆ ಆದ ನಂತರ ಸುಮಾರು ಎರಡು ವರ್ಷ ಆರು ತಿಂಗಳವರೆಗೆ ನಾನು ಮತ್ತು ಎದುರುಗಾರನು ಉತ್ತಮ ಸಾಂಸಾರಿಕ ಜೀವನ ನಡೆಸಿದ್ದೆವು. ಮದುವೆಯ ಸಮಯದಲ್ಲಿ ಎದುರುಗಾರನಿಗೆ ಯಾವುದೇ ವರೋಪಚಾರ ನೀಡಿರಲಿಲ್ಲ ಎಂದರೆ ಸರಿಯಲ್ಲ. ನಾನು ತವರು ಮನೆಯಲ್ಲಿ ವಾಸ ಮಾಡಲು ಪ್ರಾರಂಭಿಸಿ 3 ವರ್ಷ ಆಗಿರುತ್ತದೆ. ಸದರಿ 3 ವರ್ಷಗಳಲ್ಲಿ ಎದುರುಗಾರರು ನನ್ನನ್ನು ತವರು ಮನೆಗೆ ನೋಡಲು ಬಂದಿರುವುದಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ ಸರಿ ಇದೆ

ಎಂದು ಒಪ್ಪಿರುತ್ತಾರೆ.

Sd/-

ದಿವಾಣಿ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ

ಹಾನಗಲ್

ಸಾಕ್ಷಿದಾರರ ಸಹಿ